ಅರಸೀಕೆರೆ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯದಲ್ಲಿ

ಸಿ.ಸಿ. ನಂಃ **260/20**

| | | | |
|---|---|---|---|
| ಸಾಕ್ಷಿದಾರರ ಹೆಸರು | ಮಂಜೇಗೌಡ ಜಿ.ಎನ್. | ಸಿ.ಡಬ್ಲ್ಯೂ- | 10 |
| ತಂದೆ/ಗಂಡನ ಹೆಸರು | ನೀಲೇಗೌಡ | ಪಿ.ಡಬ್ಲ್ಯೂ | 6 |
| ವಯಸ್ಸು | 59 ವರ್ಷ | ಪ್ರಮಾಣ ವಚನ ಭೋಧಿಸಿದ ದಿನಾಂಕ | |
| ವೃತ್ತಿ | ಎ.ಎಸ್.ಐ, ಗಂಡಸಿ ಪೋಲೀಸ್ ಠಾಣೆ | | |
| ವಾಸ | ಗಂಡಸಿ | 18.03.2026 | |

**-:ಮುಖ್ಯ ವಿಚಾರಣೆ ಸಸಅ ರವರಿಂದಃ-**

ನಾನು 2016 ರಿಂದ 2022 ರವರೆಗೆ ಅರಸೀಕೆರೆ ನಗರ ಪೋಲೀಸ್ ಠಾಣೆಯಲ್ಲಿ ಹೆಚ್.ಸಿ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ30-05-2020 ರಂದು ನಾನು ನನ್ನ ಠಾಣೆಯಲ್ಲಿದ್ದಾಗ ಚಾಸಾ-1 ಇವರು ನನ್ನ ಸಮಕ್ಷಮ ಹಾಜರಾಗಿ ತಮ್ಮ ಲಿಖಿತ ದೂರನ್ನು ಸಲ್ಲಿಸಿರುತ್ತಾರೆ. ನಾನು ಅದನ್ನು ಸ್ವೀಕರಿಸಿ ನಮ್ಮ ಠಾಣಾ ಗುನ್ನಾ ನಂಃ 51/20 ನ್ನು ದಾಖಲು ಮಾಡಿರುತ್ತೇನೆ. ನಾನು ಸ್ವೀಕರಿಸಿದ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-1 ಎಂದು ಈಗಾಗಲೇ ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಗಿದೆ. ನಾನು ದಾಖಲು ಮಾಡಿರುವ ಪ್ರ.ವ.ವರದಿಯನ್ನು ನಿ.ಪಿ.7 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ನಾನು ದೂರನ್ನು ಹಾಗೂ ಪ್ರ.ವ.ವರದಿಯನ್ನು ನನ್ನ ಮೇಲಾಧಿಕಾರಿಗಳಿಗೆ ಹಾಗೂ ಈ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ.

ನಂತರ ಆರೋಪಿತರಿಗೆ ಕಲಂ 41(ಎ) ರಡಿಯಲ್ಲಿ ನೋಟೀಸನ್ನು ಜಾರಿ ಮಾಡಿರುತ್ತೇನೆ. ಸದರಿ ನೋಟೀಸುಗಳನ್ನು ಕ್ರಮವಾಗಿ ನಿಪಿ-8 ರಿಂದ 11 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-8(ಎ) ರಿಂದ 11(ಎ) ಎಂದು ಗುರುತಿಸಲಾಯಿತು. ದಿಃ31-05-2020 ರಂದು ಚಾಸಾ-1 ರವರು ತೋರಿಸಿದಂತೆ ಚಾಸಾ-5 ರಿಂದ 7 ರವರ ಸಮಕ್ಷಮ ನಿಪಿ-2 ರಂತೆ ಸ್ಥಳ ಮಹಜರ್ ನ್ನು ಮಾಡಿ ನಿಪಿ-3 ಮತ್ತು 4 ರಂತೆ ಫೋಟೋಗಳನ್ನು ತೆಗೆದಿರುತ್ತೇನೆ. ನಿಪಿ-2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಂತರ ಸ್ಥಳದಲ್ಲಿ ಕಚ್ಚಾ ನಕ್ಷೆಯನ್ನು ತಯಾರು ಮಾಡಿರುತ್ತೇನೆ. ಸದರಿ ನಕ್ಷೆಯನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-

12(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-2 ರಿಂದ 4 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ10-09-2020 ರಂದು ನಿಪಿ-5 ರಂತೆ ಚಾಸಾ-1 ರವರ ಹೇಳಿಕೆಯನ್ನು ಮಾನ್ಯ ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತಾರೆ. ನಂತರ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

<u>ಪಾಟೀ ಸವಾಲು ಶ್ರೀ ಎಸ್.ಜಿ.ಎಂ. ವಕೀಲರಿಂದಃ-</u>

ಒಂದು ದಿನ ತಡವಾಗಿ ದೂರುಸಲ್ಲಿಸಲಾಗಿದೆ ಎಂದರೆ ಸರಿ. ಆದರೆ ಚಾಸಾ-1 ರವರು ದೂರಿನಲ್ಲಿ ತನ್ನ ಸೊಂಟ ನೋವು ಆಗಿದ್ದರಿಂದ ತಡವಾಗಿ ದೂರು ಸಲ್ಲಿಸುತ್ತಿರುವುದಾಗಿ ಹೇಳಿರುತ್ತಾರೆ. ಚಾಸಾ-1 ರವರು ಆರೋಪಿತರ ಮನೆಯಲ್ಲಿ ಭೋಗ್ಯಕ್ಕೆ ಇದ್ದ ಬಗ್ಗೆ ದಾಖಲೆಯನ್ನು ಪಡೆದಿಲ್ಲ. ಕೃತ್ಯ ನಡೆದ ಸ್ಥಳದ ಮನೆಯ ದಾಖಲೆಯನ್ನು ಪಡೆದಿಲ್ಲ. ಆ ಘಟನೆಯ ಸಮಯದಲ್ಲಿ ಚಾಸಾ-1 ರವರು ತೊಟ್ಟಿದ್ದ ಬಟ್ಟೆಯನ್ನು ಅಮಾನತ್ತುಪಡಿಸಿಕೊಂಡಿಲ್ಲ. ಪಿರ್ಯಾದಿದಾರರು ಹೇಳಿದಂತೆ ಆರೋಪಿತರು ಯಾವುದೇ ಗಲಾಟೆ ಮಾಡಿಲ್ಲ, ಸದರಿ ಪ್ರಕರಣಕ್ಕೂ ಆರೋಪಿತರಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಯಾವುದೇ ಆರೋಪ ಸಾಬೀತಾಗದೇ ಇದ್ದರೂ ಎಲ್ಲಾ ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ.ದಿಃ**18-03-2026.**